<u>ಸಾಕ್ಷಿಗೆ ದಿನಾಂಕ ***15 -11-2025*** ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು : ವಾದಿಯ ಪರ ಶ್ರೀ ಪಿ ಆರ್ ಎಸ್ ವಕೀಲರಿಂದಃ</u>

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ವಿರುಪಾಕ್ಷಪ್ಪ ರವರು ಮಾಹಿತಿ ನೀಡಿರುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ಮಾಹಿತಿ ಇರುತ್ತದೆ. ನನಗೆ ವಾದಿಯರ ಮತ್ತು 1 ರಿಂದ 8 ಹಾಗು 13 ರಿಂದ 16 ನೇಪ್ರತಿವಾದಿಯರ ಬಗ್ಗೆ ಮಾಹಿತಿ ಇರುತ್ತದೆ. ಅವರ ಮನೆತನದ ವಂಶಾವಳಿ ಬಗ್ಗೆ ಮಾಹಿತಿ ಇರುತ್ತದೆ. ವಾದಿಯರ ಮತ್ತು 1 ರಿಂದ 8 ಹಾಗು 13 ರಿಂದ 16 ನೇಪ್ರತಿವಾದಿಯರ ಮೂಲ ಪುರುಷ ರುದ್ರಪ್ಪ ಗೋಕಾವಿ. ಅವರ ಹೆಂಡತಿಯ ಹೆಸರು ನೀಲಮ್ಮ. ರುದ್ರಪ್ಪ ರವರಿಗೆ ಶಂಕ್ರಮ್ಮ, ಚನ್ನಬಸಪ್ಪ, ಈರಪ್ಪ ಮತ್ತು ಚನ್ನಪ್ಪ ಎಂದು ಮಕ್ಕಳು ಇರುತ್ತಾರೆ. ಚನ್ನಬಸಪ್ಪ ತೀರಿಕೊಂಡಿರುತ್ತಾರೆ. ದಾವಾ ಆಸ್ತಿಗಳ ಬಗ್ಗೆ ಮಾಹಿತಿ ಇರುತ್ತದೆ. ದಾವಾ ಆಸ್ತಿಗಳು ವಾದಿಯರ ಮತ್ತು 1 ರಿಂದ 8 ಹಾಗು 13 ರಿಂದ 16 ನೇಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿಗಳು ಇರುತ್ತವೆ ಎಂದರೆ ಸರಿ. ಅಮೀನಗಡದಲ್ಲಿ ಸರ್ವೆ ನಂ. 117/1, 117/2 ಕ್ಷೇತ್ರ 6 ಎಕರೆ 16 ಗುಂಟೆ ಮತ್ತು ಮನೆ ನಂ. 491 ಇರುತ್ತದೆ. ನನಗೆ ಈಗ 72 ವರ್ಷ ವಯಸ್ಸು. ನಾನು ಶಿವಾಚಾರ್ಯ ದೇವಾಂಗ ಸಮಾಜಕ್ಕೆ ಸೇರಿದವರು. ವಾದಿಯರು ಮತ್ತು 1 ರಿಂದ 8 ಹಾಗು 13 ರಿಂದ 16 ನೇಪ್ರತಿವಾದಿಯರು ಮತ್ತು ನಾನು ಒಂದೇ ಸಮಾಜಕ್ಕೆ ಸೇರಿದರು. ನಾನು ಆ ಸಮಾಜದವನು ಆಗಿದ್ದರಿಂದ ಆ ಸಮಾಜದಲ್ಲಿ ಹಿರಿತನ ಮಾಡುತ್ತೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿಬರೆದಂತೆ ರುದ್ರಪ್ಪ ರವರ ಮರಣಾನಂತರ ಅವರ ಮಕ್ಕಳಾದ ಚನ್ನಬಸಪ್ಪ ರವರ ವಾರಸುದಾರರುಮತ್ತು ಈರಪ್ಪ ಮತ್ತು ಚನ್ನಪ್ಪ ರವರ ನಡುವೆ ಕೂಡಿ ನಡೆಯದ ಕಾರಣ ಅವರವರ ನಡುವೆ ಅಪಸಾತ್ ನಲ್ಲಿ ವಾಟ್ನಿ ಆಗಿರುತ್ತದೆ ಎಂದು ನಮೂದಿಸಿದ್ದು, ಸದರಿ ವಾಟ್ನಿಯಲ್ಲಿ ನಿವೇನಾದರೂ ಭಾಗವಹಿಸಿದ್ದೀರಾ ಎಂದರೆ ಸಾಕ್ಷಿದಾರರು ನನ್ನನ್ನು ಕರೆದಿದ್ದರು ಎಂದು ಹೇಳುತ್ತಾರೆ. ನನ್ನ ಜೊತೆ ಸಂಗಪ್ಪ ದಡ್ಡಿನ, ಪರುತಪ್ಪ ಸಿಂಹಾಸನ ಇದ್ದರು. ಪಾಲುವಾಟ್ನಿ ಪತ್ರವನ್ನು ಹಾಜರು ಪಡಿಸಿದ್ದಾರಾ ಎಂದರೆ ಹಾಜರು ಪಡಿಸಿರಬಹುದು ಎಂದು ಹೇಳುತ್ತಾರೆ. 6 ನೇ ಪ್ರತಿವಾದಿಯು ಪಾಲುವಾಟ್ನಿ ಪತ್ರವನ್ನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿದಾರರು ನನಗೆ ಅಷ್ಟು ಮಾಹಿತಿ ಇರುವುದಿಲ್ಲ ಎಂದು ಹೇಳುತ್ತಾರೆ. ವಾದಿಯರಿಗೆ ಪಾಲು ಕೊಡಬಾರದು ಎಂದು 1 ರಿಂದ 8 ನೇ ಪ್ರತಿವಾದಿಯರು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1995 ರಲ್ಲಿ

ಗುರು ಹಿರಿಯರ ಸಮಕ್ಷಮ ಪಾಲುವಾಟ್ನಿ ಕುರಿತು ವಾಟ್ನಿ ಸ್ಮರಣಾರ್ಥ ಟಿಪ್ಪಣಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯು ಕೂಡ ಪಾಲು ವಾಟ್ನಿ ಆಗಿದೆ ಎಂದು ತೋರಿಸಲು ಕಾಯ್ದೆ ಬದ್ದ ಕಾಗದ ಪತ್ರಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿದಾರರು ಪಾಲು ಆಗಿರುತ್ತದೆ ಎಂದು ಹೇಳುತ್ತಾರೆ. ಪಾಲುವಾಟ್ನಿಯಲ್ಲಿ ಯಾರು ಯಾರಿಗೆ ಯಾವ ಆಸ್ತಿ ಬಂದಿದೆ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ಅಮೀನಗಡದಲ್ಲಿ 6 ಎಕರೆ 16 ಗುಂಟೆ ಪೈಕಿ ತಲಾ 3 ಎಕರೆ 8 ಗುಂಟೆ ಈರಪ್ಪ ಮತ್ತುಚನ್ನಪ್ಪ ರವರಿಗೆ ಬಂದಿದ್ದು ಮತ್ತು ತುಳಸಿಗೇರಿಯಲ್ಲಿ ಇರುವ 4 ಎಕರೆ ಕ್ಷೇತ್ರ ರುದ್ರಪ್ಪ ರವರ ಪಾಲಿಗೆ ಬಂದಿದ್ದು ಅದನ್ನು ಮಾರಾಟ ಮಾಡಿ ಬಿಜಾಪೂರದಲ್ಲಿ ಪ್ಲಾಟ ತೆಗೆದುಕೊಂಡು ಮನೆಯನ್ನು ಚನ್ನಬಸಪ್ಪ ರವರ ಮಗನಿಗೆ ಕಟ್ಟಿಸಿಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಪಾಲುವಾಟ್ನಿಯಲ್ಲಿ ಹೆಣ್ಣುಮಕ್ಕಳಿಗೆ ಏನು ಕೊಟ್ಟಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಪಾಲುವಾಟ್ನಿಯಲ್ಲಿ ಹೆಣ್ಣುಮಕ್ಕಳು ಸಹಿ ಮಾಡಿರುವುದಿಲ್ಲ ಎಂದರೆ ಸಾಕ್ಷಿದಾರರು ನನಗೆ ಅಷ್ಟಾಗಿ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಕಾಯ್ದೆ ಬದ್ದ ಹಿಸ್ಸಾ ಇರುತ್ತದೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆನಂ. 213/1 ಸಿ ಇದನ್ನು ಗೋವಿಂದಪ್ಪ ಒಂಟಗೋಡಿ ಇವರಿಗೆ 48 ಸಾವಿರ ರೂ.ಗಳಿಗೆ ಮಾರಾಟ ಮಾಡಿದ್ದು, ಸದರಿ ವ್ಯವಹಾರದಲ್ಲಿ ನಾನು ಸಹಿ ಮಾಡಿರುವುದಿಲ್ಲ. ಸರ್ವೆ ನಂ. 213/1 ಸಿ ಇದರ ಉತಾರೆಯಲ್ಲಿ ಈರಪ್ಪ ರವರ ಹೆಸರು ಏಕೆ ಬಂದಿರುತ್ತದೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಆಸ್ತಿಯಲ್ಲಿ ಚನ್ನಬಸಪ್ಪ ರವರ ಮಕ್ಕಳಿಗೆ ಪಾಲು ಕೊಡಬೇಕಾಗುತ್ತದೆ ಎಂದು ಈರಪ್ಪ ರವರು ತಮ್ಮ ಹೆಸರನ್ನು ಮಾತ್ರ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಮಾರಾಟ ಆಗುವಾಗ ಚನ್ನಬಸಪ್ಪರವರ ವಾರಸುದಾರರಾದ ಚನ್ನಪ್ಪ ಮತ್ತು ಶಂಕ್ರವ್ವ ಜೀವಂತ ಇದ್ದರು. ಚನ್ನಬಸಪ್ಪ ರವರ ವಾರಸುದಾರರು ಇದ್ದಾಗ ಈರಪ್ಪ ರವರಿಗೆ ಸದರಿ ಆಸ್ತಿಯನ್ನು ಮಾರಾಟ ಮಾಡುವ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ರುದ್ರಪ್ಪ ರವರ ವಾರಸುದಾರರು ಇದ್ದುದರಿಂದ ಈರಪ್ಪ ರವರಿಗೆಷ್ಟೇ ಅಲ್ಲದೇ ಉಳಿದ ಮಕ್ಕಳಿಗೂ ಕೂಡ ಪಾಲು ಇರುತ್ತದೆ ಎಂದರೆ ಸಾಕ್ಷಿದಾರರು ಈರಪ್ಪ ರವರಿಗೆ ಮಾತ್ರ ಹಕ್ಕು ಇರುತ್ತದೆ ಎಂದು ಹೇಳುತ್ತಾರೆ. ಈರಪ್ಪ ರವರಿಗೆ ಯಾವುದೇ ಮಾಲ್ಕೀ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಈರಣ್ಣ ರವರಿಗೆ ಮನೆ ಕಟ್ಟಿಸಿದ ಬಗ್ಗೆ ದಾಖಲೆಗಳನ್ನು ನೋಡಿರುವುದಿಲ್ಲ. ಅವರು ಮನೆ ಕಟ್ಟಿಸಿಕೊಟ್ಟಿರುವುದಿಲ್ಲ, 6 ನೇ

ಪ್ರತಿವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯು ಪ್ಲಾಟ ನಂ. 11 ನ್ನು ಮಾರಾಟ ಮಾಡಿದ ವ್ಯವಹಾರದಲ್ಲಿ ನಾನು ಇರಲಿಲ್ಲ. ಪ್ಲಾಟ ನಂ.11 ಮತ್ತು 11 ಎ ಮತ್ತು ಮನೆ ನಂ.479 ಮತ್ತು 14 ಇವುಗಳನ್ನು ರುದ್ರಪ್ಪ ರವರು ಖರೀದಿ ಹಿಡಿದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು 479 ಇದು ಮೂಲತಃ ಮನೆ ಇದ್ದು, ಉಳಿದವುಗಳನ್ನು ಈರಪ್ಪ ರವರು ಖರೀದಿ ಹಿಡಿದಿರುತ್ತಾರೆ ಎಂದು ಹೇಳುತ್ತಾರೆ.

**ಮುಂದು ವರೆದ ಪಾಟೀ ಸವಾಲಿಗೆ ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.